**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 27.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ನಾನು ಮೈಸೂರಿನ ಶ್ರೀರಾಂಪುರದಲ್ಲಿ ವಾಸವಿರುತ್ತೇನೆ. ನಾನು ಮೈಸೂರಿನಲ್ಲಿಯೇ ಜನಿಸಿರುತ್ತೇನೆ. ಪ್ರತಿವಾದಿಗಳೆಲ್ಲರೂ ನನಗೆ ಗೊತ್ತಿರುತ್ತಾರೆ ಮತ್ತು ಇವರೆಲ್ಲರೂ ಬಿದರಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. ನಾನು ಬಿ.ಎಸ್ಸಿ ಪದವೀಧರೆ. ನನ್ನ ಮತ್ತು ನನ್ನ ತಾಯಿಯ ಚುನಾವಣಾ ಮತದಾರರ ಪಟ್ಟಿ ಮೈಸೂರಿನ ವಿಳಾಸದಲ್ಲಿರುತ್ತದೆ. ನಾನು ನನ್ನ ಅಂಕಪಟ್ಟಿ ಅಥವಾ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ. ಕಂದಾಯ ಇಲಾಖೆಯವರು ನೀಡುವ ವಂಶವೃಕ್ಷದ ಧೃಡೀಕರಣ ಪತ್ರವನ್ನು ಹಾಜರುಪಡಿಸಿಲ್ಲ. ದಾವಾ ಸ್ವತ್ತುಗಳು ನನ್ನ ತಾತ ಹೆತ್ತನಾಯಕರವರಿಗೆ ಸೇರಿರುತ್ತವೆಂದು ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ನನಗು ಮತ್ತು 1 ರಿಂದ 5 ನೇ ಪ್ರತಿವಾದಿಗಳಿಗು ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ನನ್ನ ವಾದ ಪತ್ರದ ಜೊತೆ ಹಾಜರುಪಡಿಸಿರುವ ವಂಶವೃಕ್ಷದ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನನಗು ಮತ್ತು 1 ರಿಂದ 5 ನೇ ಪ್ರತಿವಾದಿಗಳಿಗು ಯಾವುದೇ ಸಂಬಂಧವಿಲ್ಲದಿದ್ದರು ಆಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಲಿಂಗನಾಯಕ @ ಹೆತ್ತನಾಯಕರವರಿಗೆ ವೀರಮ್ಮ @ ಸಣ್ಣಅಂಕಮ್ಮ ಎಂಬ ಮೊದಲನೇ ಹೆಂಡತಿ ಇದ್ದರು ಎಂದರೆ ಸರಿ. ಸದರಿ ಹೆತ್ತನಾಯಕ ಮತ್ತು ವೀರಮ್ಮರವರಿಗೆ 1 ರಿಂದ 3 ನೇ ಪ್ರತಿವಾದಿಗಳು ಮತ್ತು ಮೃತ ಮರಿಲಿಂಗನಾಯಕರವರು ಅವರ ಮಕ್ಕಳಾಗಿರುತ್ತಾರೆಂದರೆ ಸರಿ. ಲಿಂಗನಾಯಕ @ ಹೆತ್ತನಾಯಕರವರಿಗೆ ನಂಜಮ್ಮ ಎಂಬ ಎರಡನೇ ಹೆಂಡತಿ ಇದ್ದರು ಎಂದರೆ ಸರಿ. 4 ನೇ ಪ್ರತಿವಾದಿ ಸದರಿ ನಂಜಮ್ಮರವರ ಮಗ ಎಂದರೆ ಸರಿ. ಹೆತ್ತನಾಯಕರವರ ಮೊದಲನೇ ಹೆಂಡತಿಯ ಮಗ ಮೃತ

ಮರಿಲಿಂಗನಾಯಕರವರು ನನ್ನ ತಾಯಿಯನ್ನು ಸಾಂಪ್ರದಾಯಿಕವಾಗಿ ಮದುವೆಯಾಗಿರಲಿಲ್ಲ ಮತ್ತು ನಾನು ಅವರ ವಾರಸುದಾರರಲ್ಲವೆಂದರೆ ಸರಿಯಲ್ಲ. 6 ನೇ ಪ್ರತಿವಾದಿ ಮೃತ ಮರಿಲಿಂಗನಾಯಕರವರ ಮೊದಲನೇ ಹೆಂಡತಿಯಾಗಿರುತ್ತಾರೆ. 7 ನೇ ಪ್ರತಿವಾದಿ ಮೃತ ಮರಿಲಿಂಗನಾಯಕರವರ ಮೊದಲನೇ ಹೆಂಡತಿಯ ಮಗನಾಗಿರುತ್ತಾನೆ. ನನ್ನ ವಾದ ಪತ್ರದಲ್ಲಿ ನನ್ನ ತಾಯಿ ಮೃತ ಮರಿಲಿಂಗನಾಯಕರವರ ಎರಡನೇ ಹೆಂಡತಿ ಮತ್ತು ನಾನು ಅವರ ಮಗಳು ಎಂದು ಸುಳ್ಳು ವಂಶವೃಕ್ಷವನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನನ್ನ ತಾಯಿ ಮೈಸೂರಿನವರು ಎಂದರೆ ಸರಿ. ನನ್ನ ತಾಯಿ ರಾಜು ಎಂಬುವವರನ್ನು ವಿವಾಹವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ರಾಜುರವರ ವೈವಾಹಿಕ ದಾಂಪತ್ಯದಿಂದ ನಾನು ಮತ್ತು ಆರ್. ಸ್ವಾಮಿ ಜನಿಸಿರುತ್ತೇವೆಂದರೆ ಸರಿಯಲ್ಲ. ಆರ್. ಸ್ವಾಮಿ ಯಾರು ಎಂದು ನನಗೆ ಗೊತ್ತಿಲ್ಲ. ಮೃತ ಮರಿಲಿಂಗನಾಯಕ ಲಾರಿ ಚಾಲಕರಾಗಿದ್ದರು ಎಂದರೆ ಸರಿ. ಸದರಿ ಮರಿಲಿಂಗನಾಯಕ 1 ಮತ್ತು 2 ನೇ ಪ್ರತಿವಾದಿಗಳಿಂದ ಹಣ ಪಡೆದು ಲಾರಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಆ ರೀತಿ ಲಾರಿ ಖರೀದಿಸಿದ ನಂತರ ಮೃತ ಮರಿಲಿಂಗನಾಯಕ ಮೈಸೂರಿನಲ್ಲಿ ವ್ಯವಹಾರ ನಡೆಸಿಕೊಂಡು ಬರುತ್ತಿದ್ದರದು ಎಂದರೆ 1 ಮತ್ತು 2 ನೇ ಪ್ರತಿವಾದಿಗಳು ಲಾರಿ ಖರೀದಿಸಲು ಹಣ ಕೊಟ್ಟಿರಲಿಲ್ಲ, ಸದರಿ ಲಾರಿಯನ್ನು ನನ್ನ ತಂದೆ ಸ್ವತಃ ಖರೀದಿಸಿ ಮೈಸೂರಿನಲ್ಲಿ ವ್ಯವಹಾರ ನಡೆಸಿಕೊಂಡು ಬರುತ್ತಿದ್ದರು. ನನ್ನ ತಂದೆ ಕೇವಲ ಚಾಲಕರಾಗಿದ್ದರಿಂದ ಯಾವುದೇ ಲಾರಿಯನ್ನು ಖರೀದಿಸುವಷ್ಟು ಸಾಮರ್ಥ್ಯವಿರಲಿಲ್ಲವೆಂದರೆ ಸರಿಯಲ್ಲ. ಸದರಿ ಮರಿಲಿಂಗನಾಯಕ ರಸ್ತೆ ಅಪಘಾತದಿಂದ ಮೃತಪಟ್ಟಿರುತ್ತಾರೆಂದರೆ ಸರಿ. ನಾನು, 6 ಮತ್ತು 7 ನೇ ಪ್ರತಿವಾದಿಗಳು ಮೃತ ಮರಿಲಿಂಗನಾಯಕರವರ ವಾರಸುದಾರರಲ್ಲವೆಂದರೆ ಸರಿಯಲ್ಲ. 6 ನೇ ಪ್ರತಿವಾದಿ ಮೃತ ಮರಿಲಿಂಗನಾಯಕರವರ ಮೊದಲನೇ ಹೆಂಡತಿ ಆಗಿರುವುದಿಲ್ಲ ಮತ್ತು 7 ನೇ ಪ್ರತಿವಾದಿ 6 ನೇ ಪ್ರತಿವಾದಿಯ ಮಗನಾಗಿರುವುದಿಲ್ಲವೆಂದರೆ

ಸರಿಯಲ್ಲ. ನಾನು, 6 ಮತ್ತು 7 ನೇ ಪ್ರತಿವಾದಿಗಳು ಮೃತ ಮರಿಲಿಂಗನಾಯಕರವರ ವಾರಸುದಾರರಾಗಿರುವುದಿಲ್ಲವೆಂದರೆ ಸರಿಯಲ್ಲ. ನಾನು, 6 ಮತ್ತು 7 ನೇ ಪ್ರತಿವಾದಿಗಳು ಒಬ್ಬರಿಗೊಬ್ಬರು ಶಾಮೀಲಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಿ.ಪಿ.-1 ರಲ್ಲಿ ಎರಡನೇ ಐಟಂ ದಾವಾ ತಪಶೀಲು ಸ್ವತ್ತು ಲಿಂಗನಾಯಕ ಎಂಬುವವರ ಹೆಸರಿನಲ್ಲಿದ್ದು ಸದರಿ ಪಹಣಿ ಪತ್ರಿಕೆಯ ಕಲಂ 10 ದರ್ಖಾಸ್ತು ಎಂದು ನಮೂದಾಗಿರುತ್ತದೆಂದರೆ ಸರಿ. 1 ನೇ ಐಟಂ ದಾವಾ ತಪಶೀಲು ಸ್ವತ್ತು ಲಿಂಗನಾಯಕ @ ಹೆತ್ತನಾಯಕರವರ ಆಸ್ತಿಯಾಗಿರುತ್ತದೆಂದರೆ ಸರಿ. 3 ನೇ ಐಟಂ ದಾವಾ ತಪಶೀಲು ಸ್ವತ್ತು ವೀರಮ್ಮ @ ಸಣ್ಣಅಂಕಮ್ಮರವರಿಗೆ ದರ್ಹಾಸ್ತು ಮೂಲಕ ಬಂದ ಸ್ವತ್ತಾಗಿರುತ್ತದೆಂದರೆ ಸರಿ. ನಿ.ಪಿ.-5 ರಿಂದ ನಿ.ಪಿ.-7 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗಾಗಲೀ, 6 ಮತ್ತು 7 ನೇ ಪ್ರತಿವಾದಿಗಳಿಗಾಗಲೀ ಯಾವುದೇ ರೀತಿಯ ಹಕ್ಕು-ಹಿತಾಸಕ್ತಿ ಮತ್ತು ಭಾಗಾಂಶ ರುವುದಿಲ್ಲವೆಂದರೆ ಸರಿಯಲ್ಲ. ನಾನು, 6 ಮತ್ತು 7 ನೇ ಪ್ರತಿವಾದಿಗಳು ಮೃತ ಮರಿನಿಂಗನಾಯಕರವರ ಕಾನೂನು ಬದ್ಧ ವಾರಸುದಾರರಾಗಿರುವುದಿಲ್ಲವೆಂದರೆ ಸರಿಯಲ್ಲ. ಆಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾವು ಮೃತ ಮರಿಲಿಂಗನಾಯಕರವರ ವಾರಸುದಾರರೆಂದು ಸೃಷ್ಟಿಸಿಕೊಂಡು ಈ ಸುಳ್ಳು ದಾಖಲಿಸಿರುತ್ತೇವೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**